**ಅಸಲು ದಾವೆ ಸಂಖ್ಯೆ -58/2022**
**ಡಿ.ಡಬ್ಲ್ಯೂ- 1**

**<u>ದಿನಾಂಕ 23-03-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಶ್ರೀ.ಎಸ್.ಸಿ.ಯು ವಕೀಲರಿಂದ ವಾದಿ ಪರವಾಗಿ</u>**

1.ನಿಮ್ಮ ಮನೆತನದ ಮೂಲ ಪುರುಷ ಬಸಪ್ಪ ಮತ್ತು ಅವರ ಹೆಂಡತಿ ತಿಪ್ಪವ್ವ ಎಂದರೆ ಸರಿ. ಅವರಿಗೆ ಮಹಾದೇವಪ್ಪ ಮತ್ತು ನಿಂಗಪ್ಪ ಎಂಬ ಮಕ್ಕಳು ಎಂದರೆ ಸಾಕ್ಷಿಯು ಗಂಗವ್ವ ಎಂಬ ಮಗಳು ಸಹ ಇದ್ದಾಳೆ ಎಂದು ಹೇಳುತ್ತಾರೆ. ಗಂಗವ್ವ ಅವರು ಇನ್ನೂ ಜೀವಿತ ಇದ್ದಾರೆ. ಮಹಾದೇವಪ್ಪ ಮತ್ತು ಗೌರವ್ವ ನಿಮ್ಮ ತಂದೆ-ತಾಯಿ ಇದ್ದು, ಅವರು ತೀರಿಕೊಂಡಿದ್ದಾರೆ ಎಂದರೆ ಸರಿ. ಮಹಾದೇವಪ್ಪ ಮತ್ತು ಗೌರವ್ವ ಇವರಿಗೆ ನೀವು ಮಗ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಇಬ್ಬರು ಸಹೋದರಿಯರು ತಿಪ್ಪವ್ವ ಶೆಲಿಕ್ಕೆರಿ, ಶೋಭವ್ವಾ ಬೀಳಗಿ ಎಂದು ಇದ್ದಾರೆ ಎಂದು ಹೇಳುತ್ತಾರೆ. ನಿಂಗಪ್ಪ ಇವರಿಗೆ ಮಹಾಂತೇಶ ಒಬ್ಬ ಗಂಡು ಮಗ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ 4 ಜನ ಹೆಣ್ಣುಮಕ್ಕಳು ಇದ್ದಾರೆ ಎಂದು ಹೇಳುತ್ತಾರೆ. ಮೇಲೆ ಹೇಳಿದಂತೆ ನಿಮ್ಮ ಪ್ರಕಾರ ಬಸಪ್ಪ ಅವರಿಗೆ ಇನ್ನೊಬ್ಬ ಮಗಳು ಇದ್ದಳು ಎಂದು ಮತ್ತು ನಿಮಗೆ ಸಹೋದರಿ ಇದ್ದಾಳೆ ಎಂದು ನಿಮ್ಮ ಪ್ರತಿವಾದ ಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

2.ನಿಮ್ಮ ಮತ್ತು ನಿಂಗಪ್ಪ ಅವರ ಮನೆತನದಲ್ಲಿ ದಾವಾ ಆಸ್ತಿಗಳಾದ ಸರ್ವೆ ನಂ.39/3, 64/3, 64/4 ಗಳನ್ನು ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ವಿಭಾಗ ಆಗಿದೆ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳಲ್ಲಿ ವಿಭಾಗ ಆಗಿದೆ ಎಂದು ಹೇಳುತ್ತಾರೆ. ಸರ್ವೆ ನಂ.39/3 ರ ಆಸ್ತಿಗೆ ಸಂಬಂಧಿಸಿದಂತೆ ನಿಮ್ಮ ಮತ್ತು ವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ಜಂಟಿಯಾಗಿ ಬರುತ್ತಿದೆ ಎಂದರೆ ಸಾಕ್ಷಿಯು ನಂತರ ಅವರು ತಮ್ಮ ಹೆಸರು ಸೇರಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸರ್ವೆ ನಂ.39/3 ರ ಆಸ್ತಿ ಕ್ಷೇತ್ರ 4 ಎಕರೆ 7 ಗುಂಟೆ ಆಸ್ತಿಯಲ್ಲಿ ಇನ್ನೊವರೆಗೆ ಯಾವುದೇ ವಿಭಾಗ ನಿಮ್ಮ ಮತ್ತು ವಾದಿಯ ನಡುವೆ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ಅದು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿ ನಿಮ್ಮ ಪ್ರಕಾರ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಏನು ದಾಖಲಾತಿ ಹಾಜರಪಡಿಸಿದ್ದೀರಿ ಎಂದರೆ ಅದು ನನ್ನ ತಂದೆಯ ತಾಯಿಯಿಂದ ಬಂದ ಆಸ್ತಿ ಇದ್ದು, ಅದಕ್ಕೆ ಸಂಬಂಧಿಸಿದಂತೆ ವಿಭಾಗ ಪತ್ರ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ಆ ರೀತಿ ನಿಮ್ಮ ತಂದೆಯ ತಾಯಿಯ ಹೆಸರಿನಲ್ಲಿ ಇದ್ದ ಉತಾರೆ, ನಿಮ್ಮ ತಂದೆಗೆ ಸದರಿ ಆಸ್ತಿ ಬಂದಿದೆ ಎಂದು ಮುಟೇಶನ ಇತ್ಯಾದಿ ಹಾಜರಪಡಿಸಿದ್ದೀರಾ ಎಂದರೆ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ವಾದಿಯ ಹೆಸರು ಸದರಿ ಪಹಣಿ ಪತ್ರಿಕೆಯಲ್ಲಿ ಹೇಗೆ ದಾಖಲಾಯಿತು ಎಂದರೆ ಅವರು ಹೆಸರನ್ನು ದಾಖಲು ಮಾಡಿಕೊಂಡ ಬಂದರು ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲು ಮಾಡಲು ಸಮಾಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ